**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.**

**ಸಿ.ಸಿ. ಸಂಖ್ಯೆ:264/2020**

| | |
|---|---|
| ಫ್ರಾಸಾ | 5 |
| ಚಾಸಾ | 5 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 05.04.2025.

ಸಾಕ್ಷಿಯ ಹೆಸರು : ಈಶ್ವರರೆಡಿ
ತಂದೆಯ ಹೆಸರು : ಲೇಟ್ ವೆಂಕಟರಾಯಪ್ಪ
ವಯಸ್ಸು : 60 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಕುಂಟ್ಲಪಲ್ಲಿ ಗ್ರಾಮ

**(2 ಮತ್ತು 3 ಆರೋಪಿತರು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಎಪಿಪಿ ರವರಿಂದಃ**

ನಾನು ಹೊಲದ ಬಳಿ ಇದ್ದಾಗ ಜೋರಾಗಿ ಕೂಗಿರುವುದು ಮೂರು ವರ್ಷದ ಹಿಂದೆ ಕಂಡು ಬಂದಿತು. ನಂತರ ನಾನು ಚಾಸಾ–2 ರವರ ಜಮೀನಿನ ಬಳಿಗೆ ಹೋದೆ. ಚಾಸಾ–2 ರವರ ಪ್ರಜ್ಞೆ ತಪ್ಪಿತ್ತು. ಆಕೆಗೆ ವೆಂಕಟರೆಡ್ಡಿ, ವೆಂಕಟಮ್ಮ ಹಾಗೂ ಮಂಜುರವರ ಹೊಡೆದಿದ್ದರು. ರೆಡ್ಡಪ್ಪರವರು ಕಾರನ್ನು ತಂದು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿಯವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿಃ18.05.2019 ರಂದು ಸಂಜೆ 5.30 ರಲ್ಲಿ ನಾನು ಹೊಲದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಮುಂದುವರೆದು ನಾನು ಹೊಲದ ಬಳಿ ಇದ್ದೆ ಎಂದು ನುಡಿಯುತ್ತಾರೆ. ನಾನು ಚಾಸಾ–2 ರವರ ಜಮೀನಿನ ಬಳಿ ಹೋದಾಗ ಆರೋಪಿತರು ಚಾಸಾ–2 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ಪ್ರಾಣಬೆದರಿಕೆ ಹಾಕಿ ಮಚ್ಚಿನಿಂದ ಹೊಡೆದು ಅಲ್ಲದೇ 2 ಮತ್ತು 3 ನೇ ಆರೋಪಿತರು ಚಾಸಾ–2 ರವರ ಕೂದಲು ಹಿಡಿದು ಎಳೆದಾಡಿದರು ಎಂದರೆ ನಾನು ಹೋಗುವಷ್ಟರಲ್ಲಿ ಜಗಳ ಮುಗಿದಿತ್ತು, ಆದರೆ ಚಾಸಾ–2 ರವರಿಗೆ ಅವಾಚ್ಯ ಶಬ್ಧಗಳಿಂದ ಬೈಯ್ಯುತ್ತಿದ್ದರು. ನಾನು ಹೋಗುವಷ್ಟರಲ್ಲಿ ಚಾಸಾ–2 ರವರಿಗೆ ಕೂದಲನ್ನು ಹಿಡಿದು ಎಳೆದು ಹಲ್ಲೆ ಮಾಡಿದ್ದರು ಎಂದರೆ ಸರಿ. ನಂತರ ಚಾಸಾ–2 ರವರನ್ನು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದರು ಎಂದರೆ ಸರಿ. ನಂತರ ಹೊಸಕೋಟೆ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು ಎಂದರೆ ನಾನು ಹೊರಟುಹೋಗಿದ್ದೆ ಎಂದು ನುಡಿಯುತ್ತಾರೆ.

**ಪಾಟೀಸವಾಲು : ಶ್ರೀ ಆರ್.ಜೆ. ವಕೀಲರಿಂದ, ಆರೋಪಿತರ ಪರವಾಗಿಃ**

ಆರೋಪಿತರು ಮತ್ತು ಚಾಸಾ–2 ರವರ ನಡುವೆ ಇದೇ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವಿದೆ ಎಂದರೆ ಸರಿ. ಜಮೀನು ವಿಚಾರದಲ್ಲಿ ಅವರಿಗೆ ಮೊದಲಿನಿಂದಲೂ ವೈಶಮ್ಯವಿದೆ ಎಂದರೆ ಸರಿ. ಆರೋಪಿತರು ಚಾಸಾ–2 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಮಚ್ಚಿನಿಂದ ಹಲ್ಲೆ ಮಾಡಿಲ್ಲ ಮತ್ತು ಪ್ರಾಣಬೆದರಿಕೆ ಹಾಕಿಲ್ಲ ಎಂದರೆ ಸರಿ. ಫಿರ್ಯಾದುದಾರರು ಹಾಗೂ

ಆರೋಪಿತರು ನನ್ನೊಂದಿಗೆ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ರಾಜಿ ವಿಚಾರದಲ್ಲಿ ಪೋಲಿಸ್ ಠಾಣೆಗೆ ಹೋಗಿದ್ದೆ ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.